<u>ದಿಃ 03.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟಿ ಸವಾಲುಃ ಶ್ರೀ ಆರ್.ಆರ್., ಆರೋಪಿ ಪರ ವಕೀಲರಿಂದಃ</u>

3. ಪೋಲೀಸರು ನನ್ನನ್ನು ಆಸ್ಪತ್ರೆಗೆ ಕರೆಸಿಕೊಂಡು ವಿಚಾರಿಸುವವರೆಗೆ ನನ್ನ ತಾಯಿಗೆ ಏನು ಆಗಿತ್ತು ಎನ್ನುವ ಬಗ್ಗೆ ನನಗೆ ತಿಳಿದಿರಲಿಲ್ಲ ಎಂದರೆ ನಿಜ. ನನ್ನ ತಾಯಿ ಒಬ್ಬರೆ ಪ್ರತ್ಯೇಕವಾಗಿ ವಾಸವಿದ್ದರು ಎಂದರೆ ನಿಜ. ಸಪ್ತಗಿರಿ ಆಸ್ಪತ್ರೆಯಲ್ಲಿ ನಾನು ಒಂದು ದಾಖಲೆಗೆ ಸಹಿ ಮಾಡಿರುತ್ತೇನೆ ಎಂದರೆ ನಿಜ. ಸದರಿ ದಾಖಲೆಯಲ್ಲಿ ಏನು ಬರೆಯಲಾಗಿದೆ ಎಂದು ನನಗೆ ತಿಳಿದಿಲ್ಲ ಎಂದರೆ ನಿಜ. ನಾನು ಆಸ್ಪತ್ರೆಯಲ್ಲಿ ನನ್ನ ತಾಯಿಯ ಶವವನ್ನು ಗುರುತಿಸಿರುವುದನ್ನು ಹೊರತುಪಡಿಸಿ ಪೋಲೀಸರ ಮುಂದೆ ಬೇರೆ ಏನು ಹೇಳಿಕೆಯನ್ನು ನೀಡಿಲ್ಲ ಎಂದರೆ ನಿಜ.

4. ನನ್ನ ತಾಯಿ ಹಾಗು ನಮ್ಮ ಮಧ್ಯೆ ಸರಿ ಬಾರದ ಕಾರಣದಿಂದ ನನ್ನ ತಾಯಿಯವರು ಪ್ರತ್ಯೇಕವಾಗಿ ವಾಸವಿದ್ದರು ಎಂದರೆ ಸರಿಯಲ್ಲ. ನನ್ನ ತಾಯಿಯವರು ಕಾಣೆಯಾಗಿ ಒಂದು ದಿನದ ಬಳಿಕ ನನಗೆ ಸದರಿ ವಿಚಾರ ತಿಳಿದುಬಂದಿತ್ತು. ನಾನು ಈ ಪ್ರಕರಣದ ಆರೋಪಿಯನ್ನು ಠಾಣೆಯಲ್ಲಿ ಮೊದಲ ಬಾರಿಗೆ ನೋಡಿದ್ದೆ ಎಂದರೆ ನಿಜ. ಪೋಲೀಸರು ನನಗೆ ಆರೋಪಿಯನ್ನು ತೋರಿಸಿದ್ದ ಮೇರೆಗೆ ನಾನು ಆ ವ್ಯಕ್ತಿಯನ್ನು ಗುರುತಿಸಿರುತ್ತೇನೆ ಎಂದರೆ ನಿಜ. ನನ್ನ ತಾಯಿ ತೀರಿಕೊಂಡಿರುತ್ತಾರೆ ಎನ್ನುವ ನೋವಿನ ಕಾರಣಕ್ಕಾಗಿ ನಾನು ಆರೋಪಿಯ ವಿರುದ್ಧ ಸುಳ್ಳು ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

5. ನನ್ನ ತಾಯಿಯವರು ಕಾಣೆಯಾಗುವ ಮೊದಲು ಊರಿಗೆ ಹೋಗಿದ್ದರು. ಆ ಕಾರಣದಿಂದ ಅವರು ಕಾಣೆಯಾದ ಬಗ್ಗೆ ಕೂಡಲೇ ದೂರು ನೀಡಿರಲಿಲ್ಲ. ನಾನು ಹೇಳಿರುವಂತೆ ನನ್ನ ತಾಯಿಯವರು ಕಾಣೆಯಾಗಿರಲಿಲ್ಲ ಮತ್ತು ಅವರು ಮನೆಯಲ್ಲಿಯೆ ಇದ್ದರು ಎಂದರೆ ಸರಿಯಲ್ಲ. ಆ ಕಾರಣದಿಂದ ನಾವು ಪೋಲೀಸರಿಗೆ ತಾಯಿಯವರು ಕಾಣೆಯಾದ ಬಗ್ಗೆ ದೂರು ನೀಡಿರಲಿಲ್ಲ ಎಂದರೆ ಸರಿಯಲ್ಲ.

6. ಪ್ರಾ.ಸಾ-5 ರವರು ನನ್ನ ಸ್ನೇಹಿತರು. ಸಂಬಂಧಿತ ದಿನದಂದು ಪ್ರಾ.ಸಾ-5 ರವರು ಕೂಡ ಆಸ್ಪತ್ರೆಗೆ ಬಂದಿದ್ದರು.

ಮರುವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಕೇ. ಹೇ. ಸರಿ ಇದೆ

(ಮುರಲಿಧರ ಪೈ ಬಿ.)
ಪ್ರಧಾನ ನಗರ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
(ಸಿಸಿಹೆಚ್ - 01) ಬೆಂಗಳೂರು.